

## ಮರಳಿ ಬದುಕಿಗೆ

‘ಮರಳಿ ಬದುಕಿಗೆ...’ ಎಂಬ ಅನ್ವರ್ಥಕ ಶೀರ್ಷಿಕೆಯೊಂದಿಗೆ ಜ. 7ರ ಸಂಚಿಕೆಯು ಹೊತ್ತು ತಂದ ‘ಸುಧಾ ದಿನದರ್ಶಿಕೆ’ ಅತ್ಯಾಕರ್ಷಕವಾಗಿದೆ. ಕೋವಿಡ್ ಲಾಕ್‌ಡೌನ್ ನಂತರ ಶಾಲೆಗೆ ಹೊರಟ ಚಿಣ್ಣರ ಹರುಷ ತುಂಬಿದ ನಲಿವಿನ ಚಿತ್ರ ಕಂಡಾಗ ಪೂರ್ತಿ ವರುಷಕ್ಕೆ ಸಾಕಾಗುವಷ್ಟು ಹರುಷದ ಧನಾತ್ಮಕ ಹೊನಲು ಚಿತ್ತದೊಳಗೆ ಮೂಡಿ ಮನ ಪ್ರಫುಲ್ಲಿತವಾಯಿತು. ಹಾಗೆಂದೇ ಪ್ರತಿ ವರ್ಷದಂತೆ ಕನ್ನಡ ಕಸ್ತೂರಿಯ ಸುವಾಸನೆ ಬೀರುತ್ತಾ ಮತ್ತೆ ಮಹಾರಾಷ್ಟ್ರದ ನನ್ನ ಕಚೇರಿಯ ಗೋಡೆಯ್ನಲಂಕರಿಸಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಮನೆ ಆಟ



ಶೇಷಾದ್ರಿ ಕಿನಾರ ಜ. 7ರ ಸಂಚಿಕೆಯಲ್ಲಿ ಬರೆದ ‘ಮನೆ ಆಟ’ ಕಥೆ ವಿಶಿಷ್ಟವಾದ ಪದ ಜೋಡಣೆಯ ಶೈಲಿಯಿಂದ ಮನಸೂರೆಗೊಳ್ಳುತ್ತದೆ. ವಯೋಸಹಜ ಪರಿಸ್ಥಿತಿಯ ಕೂಸಾಗುವ ಮುಕುಂದರಾಯರ ಕಥನ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ.

—ಎಂ.ಶಂಕರ್, ಮಲ್ಲೇಶ್ವರಂ

ಶೇಷಾದ್ರಿ ಕಿನಾರ ಅವರ ಕಥೆ ಭಿನ್ನವಾಗಿದೆ. ಅವಶ್ಯಕತೆಗಿಂತ ಹೆಚ್ಚು ಅನ್ನಿಸುವಂತೆ ಸೂಕ್ಷ್ಮ ವಿವರಗಳ ಮೂಲಕ ಕಥೆ ಬೆಳೆಸುತ್ತಾ ಆಸಕ್ತಿಯನ್ನು ಕಥೆಯ ಕಡೆಯವರೆಗೂ ಹಿಡಿದಿಟ್ಟುತ್ತಾರೆ. ಹಕ್ಕಿ ಇಲ್ಲಿ ಪ್ರಮುಖವಾದ ಸಂಕೇತ. ಅತ್ಯಂತ ಸಮರ್ಥವಾಗಿ ಹಕ್ಕಿಯ ಸಂಕೇತವನ್ನು ಬಳಸಿ ಕಥೆಯು ಅನ್ವರ್ಥವಾಗುವಂತೆ ಮಾಡಿದ್ದಾರೆ.

—ಎಸ್. ಜಿ. ನರಸಿಂಹ ಮೂರ್ತಿ, ಬೆಂಗಳೂರು

ಕಥೆ ತುಂಬಾ ಚೆನ್ನಾಗಿದೆ. ಒಬ್ಬ ವ್ಯಕ್ತಿ ತನ್ನ ಮನೆಯ ದಾರಿಯನ್ನೇ ಮರೆತು ಹುಡುಕಾಟದಲ್ಲಿರುವಾಗ ಪ್ರಕೃತಿಯೊಂದಿಗೆ ಬೆರೆತು ಮಕ್ಕಳೊಂದಿಗೆ ಮಗುವಾಗಿ ಬೆರೆತು ಅಮ್ಮನನ್ನು ಅರಸುತ್ತಿರುವ ಚಿಕ್ಕ ಮಗುವಿಗೆ ದಾರಿ ತೋರಿಸುವ ಕಾರ್ಯದಲ್ಲಿ ತೊಡಗಿಸಿಕೊಂಡು ತೃಪ್ತಿಯನ್ನು ಕಾಣುವ ಮುಕುಂದರಾಯರ ಚಿತ್ರಣ ಮನಸ್ಸಿಗೆ ಮುದ ನೀಡುತ್ತದೆ

—ರಮೇಶ್ ಎಸ್.

## ವರ್ಚುಯಲ್ ವಾರ್ಷಿಕೋತ್ಸವ

ಜ. 7ರ ಸಂಚಿಕೆಯಲ್ಲಿ ಸ್ವಯಂಪ್ರಭಾ ಬರೆದಿರುವ ‘ವರ್ಚುಯಲ್ ವಾರ್ಷಿಕೋತ್ಸವ’ ಬರಹ ಓದಿಯೇ ಬೇಸರವಾಯಿತು. ಬಾಲ್ಯದ ಸೊಗಡನ್ನು ಅನುಭವಿಸಲಾಗದ ಆ ಮಕ್ಕಳ ನೋವನ್ನು ಊಹಿಸಲು ಸಾಧ್ಯವೇ? ಮಕ್ಕಳ ವಿಕಾಸಕ್ಕೆ ಓದಿಗಿಂತ ಬಾಲ್ಯದಲ್ಲಿ ಅಗತ್ಯವಾದ ಕ್ರೀಡಾ ಚಟುವಟಿಕೆಗಳೇ ಮುಖ್ಯ. ಕಲಿಕೆಯೂ ವರ್ಚುಯಲ್ ಆಗಿರುವಾಗ ಪೋಷಕರಾದರೂ ಅವಕಾಶ ಒದಗಿ ಬಂದಾಗಲೆಲ್ಲ ಮಕ್ಕಳನ್ನು ಕ್ರೀಡಾಂಗಣಕ್ಕೆ, ಹೊರಾಂಗಣಕ್ಕೆ ಕರೆದೊಯ್ಯುವ ಪದ್ಧತಿ ಮುಂದಿನ ದಿನಗಳಲ್ಲಿ ರಿವಾಜಾದರೆ ಮಾತ್ರ ಮಕ್ಕಳ ಬೆಳವಣಿಗೆ ಸಾಧ್ಯ.

—ರಾಜೀವ್ ಎನ್. ಮಾಗಲ್, ಹಾಸನ ಜಿಲ್ಲೆ

## ವಿಶ್ವಮಾನವ

2021ರ ಮೊದಲ ಸಂಚಿಕೆ ಬಹಳ ಇಷ್ಟವಾಯಿತು. ‘ಪುರಂಜೀವಿ’ ಅವರ ‘ವಿಶ್ವಮಾನವ’ ಬರಹದಲ್ಲಿ ನಮ್ಮ ಮಹಾಕವಿ ಕುವೆಂಪು ಅವರ ಗೀತೆಯನ್ನು ಸುಂದರವಾಗಿ ವಿವರಿಸಿದ್ದಾರೆ. ‘ವಸುದೈವ ಕುಟುಂಬಕಂ’ ವರ್ಣನೆ ಮನ ಮುಟ್ಟುತ್ತದೆ. ರಾಮಾಯಣ, ಮಹಾಭಾರತ, ಶಾಂತಿಪುರಾಣ, ಉಪನಿಷತ್ತು, ಆಧ್ಯಾತ್ಮ, ಕಲೆ ಸಾಹಿತ್ಯ ವಿಶ್ಲೇಷಣೆ ಮತ್ತೆ ಮತ್ತೆ ವಿಚಾರ ಲಹರಿಯನ್ನು ಓದುವಂತೆ ಮಾಡುತ್ತದೆ.

—ಕಮಲಾದೇವಿ ಹಲ್ಲೂರ್, ಬೆಂಗಳೂರು



## ಹಚ್ಚೇವು ಭರವಸೆಯ ದೀಪ

ಜ. 7ರ ಸಂಚಿಕೆಯಲ್ಲಿ ಬಂದ ‘ಹಚ್ಚೇವು ಭರವಸೆಯ ದೀಪ’ ಲೇಖನದಲ್ಲಿ ಸಮಾಜದ ವಿವಿಧ ಕ್ಷೇತ್ರಗಳ ಸೃಜನಶೀಲರ ಅಭಿಪ್ರಾಯ ಮತ್ತು ಅನಿಸಿಕೆಗಳು ಎಲ್ಲ ವರ್ಗದ ಜನರ ಅಭಿಪ್ರಾಯ. ಕಳೆದ ವರ್ಷದ ಕಹಿಯನ್ನು ಮರೆತು, ಹೊಸ ವರ್ಷವನ್ನು ಸ್ವಾಗತಿಸುತ್ತಾ, ಪ್ರಮುಖವಾಗಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳು ಮೊದಲಿನಂತಾಗಲಿ ಎಂಬುದೇ ಎಲ್ಲರ ಆಶಯ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

ಸಂಚಿಕೆ ತುಂಬಾ ಖುಷಿ ತಂದಿದೆ. ‘ಹಚ್ಚೇವು ಭರವಸೆಯ ದೀಪ’ದ ಒಂದೊಂದು ಬರಹವೂ ಅರ್ಥಪೂರ್ಣವಾಗಿದೆ. ಶಿವಾನಂದ ಕಳವೆಯವರ ಪ್ರತಿಯೊಂದು ವಾಕ್ಯವೂ ಮನಸ್ಸಿಗೆ ನಾಟುವಂತಿದೆ; ಚಿಂತನೆಗೆ ಗ್ರಾಸವಾಗಿದೆ. ಉಳಿದ ಬರಹಗಾರರ ಅಭಿಪ್ರಾಯವೂ ಚೆನ್ನಾಗಿದೆ. ನಮ್ಮ ಜೀವನದ ಪಥವನ್ನೇ ಬದಲಿಸಿದ 2020, ನಮ್ಮ ಜೀವನ ಶೈಲಿ, ನಮ್ಮ ನಡೆ ನುಡಿಗೆ ಹೊಸ ಭಾಷ್ಯ ಬರೆದು, ಮಾನವ ಸಂಬಂಧಗಳು ಪರಿಸರಕ್ಕೆ ಹೊಂದಿಕೊಳ್ಳಲು ಅಗತ್ಯವಾದ ಪಾಠ ಕಲಿಸಿದೆ..

—ಎ.ಎನ್. ಭಟ್ಟ, ಬೆಂಗಳೂರು

## ‘ಸ್ವರ್ಗ ಪ್ರಾಪ್ತಿ?’

ಜ. 14ರ ಸಂಚಿಕೆಯಲ್ಲಿ ಸಂತೋಷಕುಮಾರ್ ಮೆಹಂದಳೆ ಬರೆದಿರುವ ‘ಸ್ವರ್ಗ ಪ್ರಾಪ್ತಿ?’ ಕಥೆ ಓದಿದೆ. ಮಹಾಭಾರತದ ಬಗ್ಗೆ ಹಲವಾರು ಕಥೆಗಳನ್ನು ಓದಿದ್ದರೂ ಈ ಕಥೆಯ ಮೂಲಕ ಹಲವು ಹೊಸ ವಿಷಯಗಳನ್ನು ತಿಳಿದುಕೊಂಡ ಹಾಗಾಯಿತು.ಕುರುಕ್ಷೇತ್ರ ಯುದ್ಧ ಮುಗಿದಮೇಲೆ ಧರ್ಮರಾಜ ರಾಜ್ಯವಾಳಲು ಪಟ್ಟ ಕಷ್ಟವನ್ನು ಲೇಖಕರು ಬಹಳ ಚೆನ್ನಾಗಿ ಬರೆದಿದ್ದಾರೆ. ಎಲ್ಲರಿಗೂ ತಿಳಿದ ವಿಷಯವೇ ಆದರೂ ಇದು ನೂತನ ಕಥೆಯಾಗಿದೆ.

—ಸಿ.ಆರ್.ಶ್ರೀನಿವಾಸ

## ಮೋಹನ ಕುರುಡಗಿ ಕಾವ್ಯ ಪ್ರಶಸ್ತಿಗೆ ಆಹ್ವಾನ

‘ಮೋಹನ ಕುರುಡಗಿ ಕಾವ್ಯ ಪ್ರಶಸ್ತಿ 2020’ಗಾಗಿ ಕವನ ಸಂಕಲನಗಳನ್ನು ಆಹ್ವಾನಿಸಲಾಗಿದೆ. 2020ನೇ ಸಾಲಿನಲ್ಲಿ ಮುದ್ರಣವಾಗಿರಬೇಕು. ಪ್ರಶಸ್ತಿ ₹10,000 ನಗದು, ಪ್ರಶಸ್ತಿ ಫಲಕಗಳನ್ನೊಳಗೊಂಡಿದೆ. ಕವನ ಸಂಕಲನದ 2 ಪ್ರತಿಗಳನ್ನು ಕಳಿಸಬೇಕು. ಕೊನೆಯ ದಿನಾಂಕ: 20 ಜನವರಿ 2021. ವಿಳಾಸ: ಅಶ್ವಿನಿ ರವಿ ಮರಡಿ, ನಂ. 4, ನಂದೀಶ್ವರ ನಗರ, ಮೊದಲನೇ ಕ್ರಾಸ್, ಕೃಷ್ಣಾ ಹಾಸ್ಟೆಲಿನ ಹತ್ತಿರ, ಕಳಸಾಪುರ ರಸ್ತೆ, ಗದಗ–582103. ಮೊ: 9972339443/ 7338240407

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in